ಕಲ್ಪನೆ ಕಾವ್ಯ

## ನಮ್ಮ ಪುಟ್ಟಿ

ಮನದ ಭಾವಗಳ ಗೋರಿಕಟ್ಟಿ
ಆಸೆ ಆಕಾಂಕ್ಷೆಗಳ ಒಂದೆಡೆ ಒಟ್ಟಿ
ಆಟ ಪಾಠಗಳ ಬಾಳಿಂದ ಅಟ್ಟಿ
ಹೊರಲಾರದೇ ಹೊತ್ತ ಮಣ್ಣಿನ ಬುಟ್ಟಿ
ಈ ನಮ್ಮ ಪುಟ್ಟಿಯ ಮಸ್ತಕಕ್ಕೆ ಇಂದು
ಪುಸ್ತಕ ನೀಡಿದೆ ದಸ್ತಕ.

ಬೀದಿ ಬದಿಯಲಿ ಬೇಡವೆಂದು
ಬಿಸಾಕಿದ ಬಿಳಿ ಹಾಳೆಯೊಳಗಿನ
ಕರಿ ಅಕ್ಷರಗಳ ಅಕ್ಕರೆಯಲಿ ನಿರುಕಿಸುತಿವೆ
ಅರಳುಗಣ್ಣು.
ಅರ್ಥವಾಗದ ಪದಗಳ ವ್ಯರ್ಥ ಹುಡುಕಾಟ

ಪುಟ್ಟ ಪುಟ್ಟಿಯರ ಬಾಲ್ಯ ಪುಟ
ತುತ್ತಿನ ಚೀಲ ತುಂಬುವ ಆರ್ಭಟದಿ
ಸೂತ್ರವಿಲ್ಲದ ಗಾಳಿ ಪಟ.
ಮಟಮಟ ಮಧ್ಯಾಹ್ನ ಬಟ್ಟ ಬಯಲಲಿ

ಪಟ್ಟು ಬಿಡದೇ ಪುಸ್ತಕ ಪೆನ್ಸಿಲ್ ಜೊತೆಯಲಿ
ಸೆಣಸಾಡುತಿಹ ಪುಟ್ಟಿಯಂಥ ಪಕ್ಷಿ,
ತೆರೆಯಲಿ ಸಂತಸದ ಅಕ್ಷಿ.

ಬಾಲ್ಯ ನಭದಲಿ ನಿಕ್ಕಿಯಾಗಿ ನಕ್ಕು,
ಪಡೆದು ಶಿಕ್ಷಣದ ಹಕ್ಕು
ಅವರು ಕಲಿತಾಗಲೇ ದೇಶಕ್ಕೊಂದು ಭೂಷಣ.

ಎಲ್ಲರ ಬಾಲ್ಯಕಾಲದ ರಕ್ಷಣೆ
ಸಿಗುವುದು ಹೊಸಬೆಳಕಿನ ಪ್ರೇರಣೆ.

● **ಇಂದಿರಾ ಮೋಟೆಬೆನ್ನೂರ**



## ಬೆಳಕಿನ ಬೀಜಗಳು

ಕಲ್ಲು ಬಂಡೆಗಳ ಮೇಲೆ
ಬೆಳಕ ಬೀಜಗಳ ಮೊಳಕೆ!
ಕಣ್ಣ ಪಿಸೆಯೊಳಗೆ
ಲೋಕ ವಿಕಾರಗಳ ಚಹರೆ

ಹೂತೊಟ್ಟ ಹುಡುಗಿಯ
ಹೂ ಪಾದಗಳು ಕುಣಿಯುತಿವೆ
ಕೆಂಡದ ಮೇಲೆ.

ಹರಿದ ಅಂಗಿಗೆ ತೇಪೆ
ಹಾಕುವ ಸೂಜಿ ಕಳೆದು ಹೋಗಿದೆ
ಗೌಡರ ಗದ್ದೆಯೊಳಗೆ

ಗುಳೆ ಹೋದ ಗುಡಿಸಲಿನ
ಚೂರು ಚೂರಾದ ವಿಳಾಸದೊಳಗೆ
ಕಾಗದದ ಹಾಯಿದೋಣಿ
ಕನಸು ಮಾರಲು ಹೋದ ಅವ್ವ
ಸೋರುವ ಜೋಳಿಗೆಯೊಳಗೆ
ಏನು ತಂದಾಳು?
ತಂಗಳ ರೊಟ್ಟಿ ತಿಂಗಳ ಜೀತದ
ವಾರಸುದಾರರು ನಾವು

ಈಗ ಬಿಸಿಲ ಕೋಲಿಂದ
ಜಾರಿಬಿದ್ದ ಬೆಳಕ ಬೀಜಗಳೇ ಮುಂದೆ
ಹೊಸ ಹಾಡು ಬರೆಯಬೇಕಿದೆ.

● **ಕಳಕೇಶ ಡಿ. ಗುಡ್ಲಾನೂರ**